ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 03-05-2017

# ಪತ್ರಿಕಾ ಆಮಂತ್ರಣ

1. ನೂತನವಾಗಿ ನಿರ್ಮಿಸಿರುವ ವೈಟ್‌ಫೀಲ್ಡ್ ಪೊಲೀಸ್ ಠಾಣೆ ಮತ್ತು ಉಪ ಪೊಲೀಸ್ ಆಯುಕ್ತರು, ವೈಟ್‌ಫೀಲ್ಡ್ ವಿಭಾಗ ಕಚೇರಿ ಉದ್ಘಾಟನೆ ಹಾಗೂ ಸಾರ್ವಜನಿಕ ಸಮಾರಂಭ.

ಉದ್ಘಾಟನೆ:
ಸಿದ್ದರಾಮಯ್ಯ. ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

ಘನ ಉಪಸ್ಥಿತಿ:
ಡಿ.ವಿ. ಸದಾನಂದಗೌಡ, ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವರು.

ಡಾ. ಜಿ. ಪರಮೇಶ್ವರ್, ಗೃಹ ಸಚಿವರು.

ಅಧ್ಯಕ್ಷತೆ:
ಅರವಿಂದ ಲಿಂಬಾವಳಿ, ಶಾಸಕರು, ಮಹದೇವಪುರ ವಿಧಾನಸಭಾ ಕ್ಷೇತ್ರ

ದಿನಾಂಕ: 04-05-2017 ಗುರುವಾರ, ಸಮಯ : ಬೆಳಿಗ್ಗೆ 11-00 ಗಂಟೆಗೆ

ಉದ್ಘಾಟನೆ ಸ್ಥಳ:
ಪ್ರೆಸ್ಟೀಜ್ ವೈಟ್ ಮಿಡೋಸ್ ಪಕ್ಕ, ಸೇಂಟ್ ಜೋಸೆಫ್ ಕಾನ್ವೆಂಟ್ ಎದುರು, ವೈಟ್‌ಫೀಲ್ಡ್ ಮುಖ್ಯ ರಸ್ತೆ, ಬೆಂಗಳೂರು.

ಸಾರ್ವಜನಿಕ ಸಮಾರಂಭ ಸ್ಥಳ:

ಇನ್ನರ್ ಸರ್ಕಲ್, ವೈಟ್‌ಫೀಲ್ಡ್, ಬೆಂಗಳೂರು – 560 066

2. ಪತ್ರಿಕಾಗೋಷ್ಠಿ:

ಶ್ರೀ ಯಲುವಹಳ್ಳಿ ಎನ್. ರಮೇಶ್
ಅಧ್ಯಕ್ಷರು, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅವರಿಂದ

ದಿನಾಂಕ: 4-5-2017 ಗುರುವಾರ, ಸಮಯ: ಮಧ್ಯಾಹ್ನ 12-30 ಗಂಟೆಗೆ
ಸ್ಥಳ: ಜನ ಅಂಗಳ, ಸ್ವಾತಂತ್ರ್ಯ ಉದ್ಯಾನವನ, ಗಾಂಧೀನಗರ, ಬೆಂಗಳೂರು

## ಪತ್ರಿಕಾ ಪ್ರಕಟಣೆ

# ಮೇ 5 ರಿಂದ 24 ರವರೆಗೆ
# ಮಾವು ಹಾಗೂ ಹಲಸು ಪ್ರದರ್ಶನ ಮತ್ತು ಮಾರಾಟ ಮೇಳ

ಬೆಂಗಳೂರು, ಮೇ 3 (ಕರ್ನಾಟಕ ವಾರ್ತೆ)

ತೋಟಗಾರಿಕೆ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಮೇ 5 ರಿಂದ 24 ರವರೆಗೆ ಹಮ್ಮಿಕೊಂಡಿರುವ ಮಾವು ಮತ್ತು ಹಲಸು ಪ್ರದರ್ಶನ ಮತ್ತು ಮಾರಾಟ ಮೇಳ – 2017 ನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ.

20 ದಿನಗಳ ಕಾಲ ನಡೆಯುವ ಈ ಮೇಳದಲ್ಲಿ ರೈತರಿಂದ ಗ್ರಾಹಕರು ನೇರವಾಗಿ ಹಣ್ಣುಗಳನ್ನು ಖರೀದಿಸಬಹುದಾಗಿದೆ. ಪ್ರತಿವರ್ಷ ಕೇವಲ ಲಾಲ್‌ಬಾಗ್‌ನಲ್ಲಿ ಮಾತ್ರ ನಡೆಯುತ್ತಿದ್ದ ಈ ಮೇಳವನ್ನು ಪ್ರಸ್ತುತ ವರ್ಷದಿಂದ ಬೆಂಗಳೂರಿನ ಹಲವು ಸ್ಥಳಗಳಲ್ಲಿ ಹಾಗೂ ಜಿಲ್ಲಾ ಕೇಂದ್ರಗಳಲ್ಲೂ ಸಹ ಹಮ್ಮಿಕೊಂಡಿರುವುದು ವಿಶೇಷವಾಗಿದೆ.

ನಗರದ ವಿವಿಧ ಆರು ಮೆಟ್ರೋ ಸ್ಟೇಷನ್, ಮುಖ್ಯ ಬಸ್ ನಿಲ್ದಾಣಗಳು ಸೇರಿದಂತೆ ಹಲವು ಮೈದಾನಗಳಲ್ಲಿ ಮಾವು ಮೇಳವನ್ನು ಹಮ್ಮಿಕೊಳ್ಳಲಾಗುತ್ತಿದ್ದು ಒಟ್ಟು 236 ರೈತರು ಈ ಮೇಳದಲ್ಲಿ ಭಾಗವಹಿಸಲು ನೋಂದಾಯಿಸಿಕೊಂಡಿದ್ದಾರೆ.

ಗ್ರಾಹಕರಿಗೆ ಕಾರ್ಬೈಡ್ ಮುಕ್ತ ಹಾಗೂ ಸಹಜವಾಗಿ ಮಾಗಿದ ಹಣ್ಣುಗಳನ್ನು ರೈತರು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವುದು ಈ ಮೇಳದ ಮೂಲ ಉದ್ದೇಶವಾಗಿದೆ.

ಮಾವು ಮತ್ತು ಹಲಸಿನಲ್ಲಿರುವ ಉತ್ತಮ ತಳಿಗಳನ್ನು ವೀಕ್ಷಿಸುವ ಮತ್ತು ಸವಿಯುವ ಅವಕಾಶ ಕಲ್ಪಿಸುವುದರ ಜೊತೆಯಲ್ಲಿ ರೈತರಿಗೆ ಮಾವಿನ ಬೇಸಾಯದಿಂದ ಉತ್ತಮ ಬೆಲೆ ದೊರಕಿಸಿಕೊಡುವ ಉದ್ದೇಶವೇ ಈ ಮೇಳದ ಮುಖ್ಯ ಗುರಿಯಾಗಿದೆ.

ಹಲವು ಪ್ರದರ್ಶನ ಮತ್ತು ಮಾರಾಟ ಮಳಿಗೆಯ ಉದ್ಘಾಟನೆಯನ್ನು ತೋಟಗಾರಿಕೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಕ್ಕಪೇಟೆ ವಿಧಾನಸಭೆ ಶಾಸಕ ಆರ್.ವಿ. ದೇವರಾಜ್ ಹಾಗೂ ಮುಖ್ಯ ಅತಿಥಿಗಳಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಚಿವರುಗಳು ಭಾಗವಹಿಸಲಿದ್ದಾರೆ ಎಂದು ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ಅಧ್ಯಕ್ಷ ಎಲ್. ಗೋಪಾಲಕೃಷ್ಣ ಅವರು ಇಂದಿನ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಾವು ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕದಿರೇಗೌಡ, ಉಪ ನಿರ್ದೇಶಕರುಗಳಾದ ಜೆ. ಗುಣವಂತ ಹಾಗೂ ಶ್ರೀಮತಿ ಎಂ. ಗಾಯಿತ್ರಿ ಅವರು ಉಪಸ್ಥಿತರಿದ್ದರು.

ಎಸ್‌ಎಂ:ಜೆಡಿ:ಜಿಪಿಆರ್.

## ಕಟ್ ಆಫ್ ಅಂಕ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟ

**ಬೆಂಗಳೂರು, ಮೇ 3 (ಕರ್ನಾಟಕ ವಾರ್ತೆ)**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ನಿಲಯ ಮೇಲ್ವಿಚಾರಕರ ಹುದ್ದೆಗಳ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ನಿಲಯ ಮೇಲ್ವಿಚಾರಕರು ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಮತ್ತು ಸದರಿ ಹುದ್ದೆಗಳ ಕಟ್–ಆಫ್ ಅಂಕಗಳನ್ನು ಆಯೋಗದ ವೆಬ್‌ಸೈಟ್ www.kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಸದರಿ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಆಯ್ಕೆಪಟ್ಟಿ ಪ್ರಕಟಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಅಯೋಗ, ಉದ್ಯೋಗ ಸೌಧ, ಬೆಂಗಳೂರು – 560 001, ಇವರಿಗೆ ಸಲ್ಲಿಸಬಹುದು. ನಿಗದಿತ ದಿನಾಂಕದ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣೀಸಲಾಗುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

# ಸಂಸ್ಥಾಪನಾ ದಿನಾಚರಣೆ

ಬೆಂಗಳೂರು, ಮೇ 3 (ಕರ್ನಾಟಕ ವಾರ್ತೆ)

ಕನ್ನಡ ಸಾಹಿತ್ಯ ಪರಿಷತ್ತು ಮೇ 5 ರಂದು ಸಂಜೆ 5.00 ಗಂಟೆಗೆ "ಕನ್ನಡ ಸಾಹಿತ್ಯ ಪರಿಷತ್ತಿನ 102 ನೇ ಸಂಸ್ಥಾಪನಾ ದಿನಾಚರಣೆ" ಯನ್ನು ನಗರದ ಶ್ರೀಕೃಷ್ಣರಾಜ ಪರಿಷನ್ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – 18 ರಲ್ಲಿ ಹಮ್ಮಿಕೊಂಡಿದೆ.

ಈ ಸಂಸ್ಥಾಪನಾ ದಿನಾಚರಣೆಯ ಉದ್ಘಾಟನೆಯನ್ನು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ. ಚಂದ್ರಶೇಖರ ಕಂಬಾರ ಅವರು ನೆರವೇರಿಸಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಮನು ಬಳಿಗಾರ್ ಅವರು ವಹಿಸಲಿದ್ದಾರೆ.

ಖ್ಯಾತ ಕವಿ ಡಾ. ಸಿದ್ಧಲಿಂಗಯ್ಯ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು, ಈ ಸಂದರ್ಭದಲ್ಲಿ ವಿಶೇಷ ಉಪನ್ಯಾಸವನ್ನು ನೀಡಲಿದ್ದಾರೆ.

ಈ ಸಮಾರಂಭದ ಮುನ್ನ ಅಂದು ಸಂಜೆ 4–15 ಗಂಟೆಗೆ ಡಾ. ಶಿವರಾಜ್ ಬ್ಯಾಡರಹಳ್ಳಿ ಅವರಿಂದ ಗೀತ ಗಾಯನವನ್ನು ಸಹ ಹಮ್ಮಿಕೊಳ್ಳಲಾಗಿದೆ.

ಎಸ್‌ಎಂ:ಜೆಡಿ:ಜಿಪಿಆರ್.

# ವೈಟ್‌ಫೀಲ್ಡ್‌ನಲ್ಲಿ ನೂತನ ಪೊಲೀಸ್ ಠಾಣೆ ಹಾಗೂ ಉಪ ಪೊಲೀಸ್ ಆಯುಕ್ತರ ಕಚೇರಿ ಉದ್ಘಾಟನೆ

ಬೆಂಗಳೂರು, ಮೇ 3 (ಕರ್ನಾಟಕ ವಾರ್ತೆ)

ಬೆಂಗಳೂರು ನಗರದ ವೈಟ್‌ಫೀಲ್ಡ್ ವಿಭಾಗದಲ್ಲಿ ನೂತನವಾಗಿ ನಿರ್ಮಿಸಿರುವ ವೈಟ್‌ಫೀಲ್ಡ್ ಪೊಲೀಸ್ ಠಾಣೆ ಮತ್ತು ಉಪ ಪೊಲೀಸ್ ಆಯುಕ್ತರು, ವೈಟ್‌ಫೀಲ್ಡ್ ವಿಭಾಗ ರವರ ಕಚೇರಿ ಉದ್ಘಾಟನೆ ಹಾಗೂ ಸಾರ್ವಜನಿಕ ಸಮಾರಂಭವನ್ನು ಮೇ 4 ರಂದು ಬೆಳಿಗ್ಗೆ 11–00 ಗಂಟೆಗೆ ಪ್ರೆಸ್ಟೀಜ್ ವೈಟ್ ಮಿಡೋಸ್ ಪಕ್ಕ, ಸೇಂಟ್ ಜೋಸೆಫ್ ಕಾನ್ವೆಂಟ್ ಎದುರು, ವೈಟ್‌ಫೀಲ್ಡ್ ಮುಖ್ಯರಸ್ತೆ ಬಳಿ ಹಮ್ಮಿಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾರಂಭದಲ್ಲಿ ಪಾಲ್ಗೊಂಡು ಈ ನೂತನ ಪೊಲೀಸ್ ಠಾಣೆ ಮತ್ತು ಉಪ ಪೊಲೀಸ್ ಆಯುಕ್ತರ ಕಚೇರಿ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ.

ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವ ಡಿ.ವಿ. ಸದಾನಂದ ಗೌಡ ಹಾಗೂ ಡಾ. ಜಿ. ಪರಮೇಶ್ವರ್, ಗೃಹ ಸಚಿವರು ಪಾಲ್ಗೊಳ್ಳುವರು. ಸಮಾರಂಭದ ಅಧ್ಯಕ್ಷತೆಯನ್ನು ಅರವಿಂದ ಲಿಂಬಾವಳಿ, ಶಾಸಕರು, ಮಹದೇಪುರ ವಿಧಾನಸಭಾ ಕ್ಷೇತ್ರ ಅವರು ವಹಿಸಲಿದ್ದಾರೆ.

ಬೆಂಗಳೂರು ನಗರಾಭಿವೃದ್ಧಿ ಮತ್ತು ಯೋಜನಾ ಸಚಿವರು ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಕೆ.ಜೆ. ಜಾರ್ಜ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಲೋಕೋಪಯೋಗಿ ಸಚಿವ ಹೆಚ್.ಸಿ. ಮಹದೇವಪ್ಪ, ನಗರಾಭಿವೃದ್ಧಿ ಮತ್ತು ಹಜ್ ಸಚಿವ ಆರ್. ರೋಷನ್ ಬೇಗ್, ಕೃಷಿ ಸಚಿವ ಕೃಷ್ಣಬೈರೇಗೌಡ, ಐ.ಟಿ. ಮತ್ತು ಬಿ.ಡಿ. ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವ ಪ್ರಿಯಾಂಕ್ ಖರ್ಗೆ, ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಮಹಾಪೌರರಾದ ಶ್ರೀಮತಿ ಜಿ. ಪದ್ಮಾವತಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ಅಧ್ಯಕ್ಷ ಮುನಿರಾಜು ಹಾಗೂ ಗೃಹ ಸಚಿವರ ಸಲಹೆಗಾರರಾದ ಕೆಂಪಯ್ಯ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿರುವ ಈ ಸಮಾರಂಭದಲ್ಲಿ ರಾಜ್ಯಸಭಾ ಸದಸ್ಯರು, ಶಾಸಕರು, ವಿಧಾನಸಭಾ ಸದಸ್ಯರು ಸೇರಿದಂತೆ ಅನೇಕ ಹಿರಿಯ ಅಧಿಕಾರಿಗಳು ಉಪಸ್ಥಿತರಿರುವರು.

ಎಸ್‌ಎಂ:ಜೆಡಿ:ಜಿಪಿಆರ್.

# ಸ್ವಾತಂತ್ರ್ಯ ಉದ್ಯಾನವನದಲ್ಲಿ
# ವಸ್ತು ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮ

**ಬೆಂಗಳೂರು, ಮೇ 3 (ಕರ್ನಾಟಕ ವಾರ್ತೆ)**

ತೆಲಂಗಾಣ ಸರ್ಕಾರದ ಕಾರಾಗೃಹ ಇಲಾಖೆಯ ಕೇಂದ್ರ ಕಾರಾಗೃಹ ಚೆಂಚಲಗೂಡ, ಹೈದರಾಬಾದ್‌ನ ಬಂದಿಗಳು ತಯಾರಿಸಿದ ಉತ್ಪನ್ನಗಳಾದ ಟವಲ್, ಬೆಡ್ ಶೀಟ್, ಡೋರ್ ಮ್ಯಾಟ್, ಅಸನ್ ಮ್ಯಾಟ್, ಕಾರ್ಪೆಟ್, ಸ್ಟೂಲ್, ಟೇಬಲ್, ರ್‍ಯಾಕ್ ಮತ್ತು ಪೇಂಟಿಂಗ್ಸ್‌ಗಳ ಪ್ರದರ್ಶನ ಮತ್ತು ಮಾರಾಟವನ್ನು ನಗರದ ಸ್ವತಂತ್ರ್ಯ ಉದ್ಯಾನವನದಲ್ಲಿ ಮೇ 13 ಮತ್ತು 14 ರಂದು ಎರಡು ದಿನಗಳ ಕಾಲ ವಸ್ತು ಪ್ರದರ್ಶನ ಹಾಗೂ ಮಾರಾಟವನ್ನು ಹಮ್ಮಿಕೊಂಡಿದೆ.

ಎಸ್‌ಎಂ:ಜೆಡಿ:ಜಿಪಿಆರ್.

# Exhibition and Sale

Bangalore May 3 (Karnataka Information)

The exhibition to display and sell out Prison made products such as towels, Bed Sheets, Door Mats, Asan Mats, Carpets, Stools, Tables, Racks, paintings made by prisoners will be held by Prisons Department, Telangana State at "Freedom Park" Bangalore City on 13th and 14th of May, 2017, The Prisons Department has regularly been holding exhibitions across India to promote prisoners made products which are qualitative and available in reasonable rates to the public.

# ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ವೈದ್ಯಾಧಿಕಾರಿ ಅಮಾನತ್ತು

**ಬೆಂಗಳೂರು, ಮೇ 3 (ಕರ್ನಾಟಕ ವಾರ್ತೆ)**

**ಆನೇಕಲ್‌ನ ಸಾರ್ವಜನಿಕ ಆಸ್ಪತ್ರೆಯ ಹಿಂದಿನ ಆಡಳಿತ ವೈದ್ಯಾಧಿಕಾರಿ ಡಾ. ಮುರಳಿ ಕೃಷ್ಣ ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧದ ಕರ್ತವ್ಯಲೋಪ ಆರೋಪದ ಬಗ್ಗೆ ಇಲಾಖಾ ವಿಚಾರಣೆ ಬಾಕಿ ಇರಿಸಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಲಾಗಿದೆ.**

**ಎಸ್‌ಎಂ:ಜೆಡಿ:ಜಿಪಿಆರ್.**

# ದೂರದರ್ಶನದಲ್ಲಿ ನೆಲದ ಸಿರಿ ಮಾಲಿಕೆ

**ಬೆಂಗಳೂರು, ಮೇ 3 (ಕರ್ನಾಟಕ ವಾರ್ತೆ)**

**ನೆಲದ ಸಿರಿ ಮಾಲಿಕೆಯಡಿ ಈ ಕೆಳಕಂಡ ಸಂಚಿಕೆಯನ್ನು ಆಯಾ ದಿನಾಂಕದಂದು ಸಂಜೆ 6:00 ರಿಂದ 6:15 ಅವಧಿಯಲ್ಲಿ ಪ್ರಸಾರ ಮಾಡಲಾಗುವುದು.**

ದಿನಾಂಕ: 05-05-2017, ಶುಕ್ರವಾರ, ಪಂಡಿತ್ ಶ್ರೀ ನರಸಿಂಹಲು ವಡವಾಟಿ, ಕ್ಲಾರೊನೆಟ್ ವಾದಕರು, ದಿನಾಂಕ: 08-05-2017, ಸೋಮವಾರ, ಡಾ|| ಆರ್. ವಿಶ್ವೇಶ್ವರನ್, ವೀಣಾ ವಾದಕರು, ದಿನಾಂಕ: 09-05-2017, ಮಂಗಳವಾರ, ಶ್ರೀಮತಿ ಸ್ಮಿತಾ ಬೆಳ್ಳೂರ್, ಹಿಂದುಸ್ಥಾನಿ ಗಾಯಕರು, ದಿನಾಂಕ: 10-05-2017, ಬುಧವಾರ, ಡಾ|| ಜಯಶ್ರೀ ಅರವಿಂದ, ಸಂಗೀತ ನಿರ್ದೇಶಕರು, ದಿನಾಂಕ: 11-05-2017, ಗುರುವಾರ, ಶ್ರೀಮತಿ ಗುರಮ್ಮ ಹಂಪಯ್ಯ ಸಂಕಿನಮಠ, ಸಮಾಜ ಸೇವಕರು, ದಿನಾಂಕ: 12-05-2017, ಶುಕ್ರವಾರ, 700 ಮೆಗಾ ವ್ಯಾಟ್ ಸಾಮರ್ಥ್ಯದ ಬಿ.ಟಿ.ಪಿ.ಎಸ್ ಘಟಕ, ದಿನಾಂಕ: 15-05-2017, ಸೋಮವಾರ, ಶ್ರೀಮತಿ ಹನುಮಾಕ್ಷಿ ಗೋಗಿ, ಸಂಶೋಧಕರು ಮತ್ತು ಶ್ರೀಮತಿ ರೊಟ್ಟಿ ಮಹಾದೇವಮ್ಮ, ರೊಟ್ಟಿ ಉದ್ಯಮಿ, ದಿನಾಂಕ: 16-05-2017, ಮಂಗಳವಾರ, ಶ್ರೀಮತಿ ಸರೋಜ ಇಟ್ಟಣ್ಣನವರ್, ಸಾಹಿತಿ, ಮತ್ತು ಶ್ರೀಮತಿ ಶಾಂತವ್ವ ಜಾಲಿಕಟ್ಟಿ, ಪಾರಿಜಾತ ಕಲಾವಿದರು. ಇವರುಗಳ ಕುರಿತು ಸಾಕ್ಷ್ಯಚಿತ್ರಗಳನ್ನು ಪ್ರಸಾರ ಮಾಡಲಾಗುವುದು.

## ಕುಡಿಯುವ ನೀರು 46 ಪ್ರಕರಣ ದಾಖಲು

ಬೆಂಗಳೂರು, ಮೇ 3 (ಕರ್ನಾಟಕ ವಾರ್ತೆ)

ಜನರಿಗೆ ಅವಶ್ಯಕವಾದ ಕುಡಿಯುವ ನೀರನ್ನು ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್ ಹೆಸರಿನಲ್ಲಿ ಮಾರಾಟ ಮಾಡಲಾಗುತ್ತಿದೆ. ಆದರೆ ಇದರಲ್ಲಿ ಸಾಕಷ್ಟು ಅವ್ಯವಹಾರ ನಡೆಯುತ್ತಿದೆ. ಇಂದು ಬೆಂಗಳೂರಿನಲ್ಲಿ 8 ಮತ್ತು ರಾಜ್ಯದ ವಿವಿದೆಡೆ 39 ತಂಡಗಳು ಮಾಲ್, ಸೂಪರ್ ಮಾರ್ಕೆಟ್, ಮಲ್ಟಿಪ್ಲೆಕ್ಸ್‌ಗಳ ಮೇಲೆ ಏಕಕಾಲದಲ್ಲಿ 188 ಕಡೆ ದಾಳಿ ನಡೆಸಿ ಒಟ್ಟು 46 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಆಹಾರ ಸಚಿವ ಯು.ಟಿ. ಖಾದರ್ ಅವರು ತಿಳಿಸಿದರು.

ಇಂದು ವಿಕಾಸ ಸೌಧದಲ್ಲಿ ಪತ್ರಕರ್ತರನ್ನುದ್ದೇಶಿಸಿ ಮಾತನಾಡಿದ ಸಚಿವರು ಏರ್‌ಪೋರ್ಟ್, ದೊಡ್ಡ ಹೋಟೆಲ್, ಮಾಲ್ ಇತ್ಯಾದಿಗಳಲ್ಲಿ ಒಂದಕ್ಕೆ ಎರಡರಷ್ಟು ಹಣ ಪಡೆದು ನೀರು ಮಾರಾಟ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಕುಡಿಯುವ ನೀರು ನೆಪದಲ್ಲಿ ಹಣ ಸುಲಿಗೆ ಮಾಡಬಾರದು ಹಾಗೂ ಸಿನಿಮಾ ಹೋಟೆಲ್ ಯಾವುದೇ ಇರಲಿ ಎಲ್ಲೂ ಸಹ ಕುಡಿಯುವ ನೀರನ್ನು ತೆಗೆದುಕೊಂಡು ಹೋಗುವುದನ್ನು ತಡೆಯಬಾರದು, ತಡೆದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಕುಡಿಯುವ ನೀರನ್ನು ಹೆಚ್ಚಿನ ದರದಲ್ಲಿ ಮಾರಾಟ ಮಾಡಿ ಮೊದಲ ಬಾರಿ ಸಿಕ್ಕಿಬಿದ್ದರೆ ರೂ. 2000 ದಂಡ, ಎರಡನೇ ಬಾರಿ ಸಿಕ್ಕಿಬಿದ್ದರೆ ಆರು ತಿಂಗಳ ಜೈಲುವಾಸ ಎಂದು ಎಚ್ಚರಿಕೆ ನೀಡಿದರು.

ಬೆಂಗಳೂರಿನ ಎಲ್ಲಾ ಮಾಲ್‌ಗಳ ಮೇಲು ಇಂದು ದಾಳಿ ನಡೆಸಲಾಗಿದೆ. ಸ್ಟಾರ್ ಹೋಟೆಲ್‌ಗಳ ಮೇಲೂ ಸಧ್ಯದಲ್ಲೇ ದಾಳಿ ನಡೆಸಲಾಗುವುದು. ಬೆಂಗಳೂರಿನಲ್ಲಿ ಒಟ್ಟು 15 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ಸೇವಾಶುಲ್ಕ ವಿಧಿಸಿ ಗ್ರಾಹಕರನ್ನು ಸುಲಿಗೆ ಮಾಡುತ್ತಿರುವ ಬಗ್ಗೆ ಸಾಕಷ್ಟು ದೂರುಗಳು ಬಂದಿತ್ತು. ಹೀಗಾಗಿ ಇಂದು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳ ಮಾಲೀಕರನ್ನು ಕರೆದು ಸಭೆ ನಡೆಸಿ ಈ ಬಗ್ಗೆ ತಿಳುವಳಿಕೆ ನೀಡಿದ್ದೇವೆ.

ಕೇಂದ್ರ ಗ್ರಾಹಕರ ನೀತಿ ಪ್ರಕಾರ ಸೇವಾಶುಲ್ಕ ಗ್ರಾಹಕರಿಂದ ಪಡೆಯುವಂತಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದೇವೆ ಎಂದು ತಿಳಿಸಿದರು.

## ವರ್ಗಾವಣೆ ಆದೇಶ

**ಬೆಂಗಳೂರು, ಮೇ 3 (ಕರ್ನಾಟಕ ವಾರ್ತೆ)**

ರಾಜ್ಯ ಸರ್ಕಾರಿ ನೌಕರರ 2017–18 ನೇ ಸಾಲಿನಲ್ಲಿ ವರ್ಗಾವಣೆಗಳನ್ನು ಪ್ರಸ್ತುತ ಸಾಲಿನಲ್ಲಿ ಜೂನ್ 15 ರೊಳಗೆ ಆದಷ್ಟು ಮಿತಿಗೊಳಿಸಿ ಪೂರ್ಣಗೊಳಿಸಲು ಸೂಚಿಸಿ ಸರ್ಕಾರಿ ಆದೇಶ ಹೊರಡಿಸಲಾಗಿದೆ.

## ಮುಖ್ಯಮಂತ್ರಿಗಳಿಂದ ಐ–ವಿವೇಕ ವೆಬ್‌ಸೈಟ್ ಅನಾವರಣ

**ಬೆಂಗಳೂರು, ಮೇ 3 (ಕರ್ನಾಟಕ ವಾರ್ತೆ)**

ಸಾರ್ವಜನಿಕರ ಹಿತದೃಷ್ಟಿ ಹಾಗೂ ರಕ್ಷಣೆಗಾಗಿ ದೇಶದಲ್ಲೇ ಮೊದಲ ಪ್ರಯೋಗವಾಗಿ ಐ ವಿವೇಕ್ ವೆಬ್‌ಸೈಟನ್ನು ರೂಪಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಇಂದು ವಿಧಾನ ಸೌಧದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಐ–ವಿವೇಕ ವೆಬ್‌ಸೈಟ್ ಅನಾವರಣ ಮಾತನಾಡಿದ ಮುಖ್ಯಮಂತ್ರಿಗಳು ಹಣಕಾಸು ಇಲಾಖೆ ಈ ವೆಬ್‌ಸೈಟನ್ನು ರೂಪಿಸಿದ್ದು ಕಾನೂನುಬಾಹಿರ ಸಂಸ್ಥೆಗಳಿಂದ ಜನರಿಗೆ ಮೋಸವಾಗುವುದನ್ನು ತಡೆಗಟ್ಟುವುದು ಇದರ ಮೂಲ ಉದ್ದೇಶವಾಗಿದೆ. ಕೆಲ ರಾಜ್ಯಗಳಲ್ಲಿ ಸಂಘ ಸಂಸ್ಥೆಗಳು ಮತ್ತು ಕಂಪನಿಗಳಿಂದ ಜನರಿಗೆ ಮೋಸವಾದ ಸುದ್ದಿಗಳನ್ನು ಓದಿದ್ದೇವೆ. ಹೀಗಾಗಿ ಈ ವೆಬ್‌ಸೈಟ್ ಮೋಸಮಾಡುವುದನ್ನು ತಪ್ಪಿಸುವುದಕ್ಕೆ ಅನುಕೂಲಕರವಾಗಿದೆ.

ಅಗ್ರಿಗೋಲ್ಡ್ ಹಗರಣ ನಮ್ಮ ಜಿಲ್ಲೆಯಲ್ಲೇ ನಡೆದಿತ್ತು. ಆಗ ಪೊಲೀಸರಿಗೆ ಅವರ ವಿರುದ್ದ ಕಠಿಣ ಕ್ರಮ ಕೈಗೊಳ್ಳುವಂತೆ ಹೇಳಿದ್ದೆ. ವಿನಿವಿಂಕ್ ಶಾಸ್ತ್ರಿ ಅಂಥವರು ಜನರಿಗೆ ಮೋಸ ಮಾಡುತ್ತಾರೆ. ಇಂತಹ ಅನೇಕ ಕೆಟ್ಟ ಅನುಭವಗಳನ್ನು ಕಟ್ಟಿಹಾಕಲು ಈ ವೆಬ್‌ಸೈಟ್ ಸಹಾಯಕವಾಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ: ಜಿ. ಪರಮೇಶ್ವರ, ಕಂದಾಯ ಸಚಿವ ಕಾಗೋಡು ತಿಮ್ಮಪ್ಪ, ಸರ್ಕಾರದ ಮುಖ್ಯ ಕಾರ್ಯದರ್ಶಿ ಸುಭಾಷ್ ಕುಂಠಿಆ ಸೇರಿದಂತೆ ಅನೇಕ ಹಿರಿಯ ಅಧಿಕಾರಿ ಭಾಗವಹಿಸಿದ್ದರು.

## ಸಮಗ್ರ ಮಕ್ಕಳ ರಕ್ಷಣಾ ಯೋಜನೆ

**ಬೆಂಗಳೂರು, ಮೇ 3 (ಕರ್ನಾಟಕ ವಾರ್ತೆ)**

ಕೇಂದ್ರ ಸರ್ಕಾರವು ಹಾಲಿ ಇರುವ ವಿವಿಧ ಯೋಜನೆಗಳಾದ ಬಾಲನ್ಯಾಯ ಕಾಯ್ದೆಯ ಅನುಷ್ಠಾನ, ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ತೆರೆದ ತಂಗುದಾಣಗಳು, ದತ್ತು ಕಾರ್ಯಕ್ರಮ ಮತ್ತು ಮಕ್ಕಳ ಸಹಾಯವಾಣಿ ಸೇವೆಗಳ ಕಾರ್ಯಕ್ರಮಗಳನ್ನು ಒಟ್ಟುಗೂಡಿಸಿ ನೂತನವಾದ ಕೇಂದ್ರ ಪುರಸ್ಕೃತ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯನ್ನು 2009–10ರಿಂದ ಜಾರಿಗೆ ತಂದಿದ್ದು, ಕರ್ನಾಟಕ ರಾಜ್ಯದಲ್ಲೂ ಸಹ ಜಾರಿಗೆ ತರಲಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಧ್ಯೆ ಸದರಿ **ICPS** ಯೋಜನೆಯ ಅನುಷ್ಠಾನದ ಬಗ್ಗೆ **MOU** ಸಹಿಯಾಗಿರುತ್ತದೆ. ಕರ್ನಾಟಕ ಸಂಘ ನೋಂದಣಿ ಕಾಯಿದೆ 1960ರ ಅನ್ವಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯನ್ನು ದಿನಾಂಕ: 5–2–2011ರಂದು ನೋಂದಣಿ ಮಾಡಲಾಗಿದೆ.

ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಬಾಲನ್ಯಾಯ ಕಾಯ್ದೆಯ ಅನುಷ್ಠಾನ, ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ಮಕ್ಕಳ ರಕ್ಷಣೆ ಮತ್ತು ಪೋಷಣೆಗಾಗಿ ತೆರೆದ ತಂಗುದಾಣಗಳು, ದತ್ತು ಕಾರ್ಯಕ್ರಮ, ಮಕ್ಕಳ ಸಹಾಯವಾಣಿ, ಪ್ರಾಯೋಜಕತ್ವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಸೊಸೈಟಿಯು ಈ ಕೆಳಕಂಡ ಸಾಮಾಜಿಕ ಕಾಯಿದೆಗಳನ್ವಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

1. ಬಾಲ ನ್ಯಾಯ (ಮಕ್ಕಳ ಪಾಲನೆ ಹಾಗೂ ರಕ್ಷಣೆ)ಕಾಯ್ದೆ, 2015.
2. ಬಾಲ ನ್ಯಾಯ (ಮಕ್ಕಳ ಪಾಲನೆ ಹಾಗೂ ರಕ್ಷಣೆ) ಕರ್ನಾಟಕ ನಿಯಮಗಳು 2016.
3. ಹಿಂದೂ ದತ್ತಕ ಮತ್ತು ನಿರ್ವಹಣೆ ಕಾಯ್ದೆ 1956
4. ಪೋಷಕತ್ವ ಮತ್ತು ವಾರ್ಡ್ಸ್ ಕಾಯ್ದೆ, 1860
5. ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ ಕಾಯ್ದೆ, 2012

**ಉದ್ದೇಶ:**

ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯು ನಿರ್ಲಕ್ಷತೆಗೊಳಗಾದ, ಪರಿತ್ಯಜಿಸಲ್ಪಟ್ಟ, ದೌರ್ಜನ್ಯಕ್ಕೆ ಒಳಗಾದ, ಶೋಷಣೆಗೆ ಒಳಗಾದ ಮತ್ತು ಕುಟುಂಬದಿಂದ ಬೇರ್ಪಟ್ಟ ಮಕ್ಕಳು ದುರ್ಬಲ ಸ್ಥಿತಿಗೆ ತಲುಪದಿರುವಂತೆ ತಡೆಯಲು ಹಾಗೂ ಇಂತಹ ಪ್ರಕರಣಗಳನ್ನು ಕಡಿಮೆ ಮಾಡಲು ಮತ್ತು ಸಂಕಷ್ಠದಲ್ಲಿರುವ ಮಕ್ಕಳ ಪರಿಸ್ಥಿತಿಯನ್ನು ಉತ್ತಮಪಡಿಸುವ ಉದ್ದೇಶವನ್ನು ಹೊಂದಿರುತ್ತದೆ.

**ಆದ್ಯತಾ ಗುಂಪು:**

ಸಮಗ್ರ ಮಕ್ಕಳ ರಕ್ಷಣಾ ಯೋಜನೆಯು ಬಾಲನ್ಯಾಯ ಕಾಯ್ದೆಯ ಅಡಿಯಲ್ಲಿ ಪಾಲನೆ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳು ಮತ್ತು ಕಾನೂನಿನೊಂದಿಗೆ ಸಂಘರ್ಷಕ್ಕೊಳಪಟ್ಟ ಮಕ್ಕಳಿಗೆ ಮತ್ತು ಕಾನೂನಿನ ಸಂಪರ್ಕಕ್ಕೆ ಬರುವ ಮಕ್ಕಳು ಅಂದರೆ ಆಪಾದಿತ ಅಥವಾ ಸಾಕ್ಷಿದಾರ ಅಥವಾ ಇತರೆ ಯಾವುದೇ ರೀತಿಯ ಪರಿಸ್ಥಿತಿಯುಳ್ಳ ಮಕ್ಕಳಿಗೆ ತನ್ನ ಉದ್ದೇಶಿತ ಕಾರ್ಯ ಚಟುವಟಿಕೆಗಳಲ್ಲಿ ಗಮನ ನೀಡುತ್ತದೆ.

ಈ ಯೋಜನೆಯು ದುರ್ಬಲ ಮಕ್ಕಳಿಗೆ ಶಾಸನಬದ್ಧ, ನಿಯಂತ್ರಣಾತ್ಮಕ ಮತ್ತು ಪೋಷಣೆ ಮತ್ತು ಪುನರ್ವಸತಿ ಸೇವೆಗಳನ್ನು ನೀಡುವುದಲ್ಲದೆ ಸಂಭಾವ್ಯ ದುರ್ಬಲ ಕುಟುಂಬದ ಮತ್ತು ಅಪಾಯದಲ್ಲಿರುವ ಕುಟುಂಬ ಮತ್ತು ಸಾಮಾಜಿಕವಾಗಿ ಹೊರತುಪಡಿಸಿದ ಗುಂಪಿನ ಮಕ್ಕಳು ಅಂದರೆ ವಲಸೆ ಕುಟುಂಬಗಳು, ಬಡತನ ರೇಖೆಗಿಂತ ಕಡಿಮೆ ಜೀವನ ಮಟ್ಟದ ಕುಟುಂಬ, ಪರಿಶಿಷ್ಟ ಜಾತಿ ಮತ್ತು ಪಂಗಡ, ಇತರೆ ಹಿಂದುಳಿದ ವರ್ಗಗಳು, ತಾರತಮ್ಯಕ್ಕೆ ಒಳಗಾದ ಕುಟುಂಬಗಳು, ಹೆಚ್‌ಐವಿ/ಏಡ್ಸ್ ಪೀಡಿತ ಮತ್ತು ಬಾಧಿತ ಮಕ್ಕಳು, ಬೀದಿ ಮಕ್ಕಳು, ಮಾದಕ ದ್ರವ್ಯ ಪೀಡಿತ ಮಕ್ಕಳು, ದೌರ್ಜನ್ಯಕ್ಕೆ ಒಳಗಾದ ಮಕ್ಕಳು, ಬಾಲಕಾರ್ಮಿಕ ಮಕ್ಕಳು, ಅನೈತಿಕ ಸಾಗಾಣಿಕೆ ಅಥವಾ ಲೈಂಗಿಕ ದೌರ್ಜನ್ಯಕ್ಕೊಳಗಾದ ಮಕ್ಕಳು, ಅನಾಥ ಮಕ್ಕಳಿಗೆ ತನ್ನ ಉದ್ದೇಶಿತ ಕಾರ್ಯ ಚಟುವಟಿಕೆಗಳಲ್ಲಿ ಗಮನ ನೀಡುತ್ತದೆ.

**ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷನಾ .ಸೊಸೈಟಿಯು ಈ ಕೆಳಕಂಡ ಸಾಮಾಜಿಕ ಶಾಸನಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.**

1. ಬಾಲ ನ್ಯಾಯ (ಮಕ್ಕಳ ಪಾಲನೆ ಹಾಗೂ ರಕ್ಷಣೆ) ಕಾಯ್ದೆ, 2015

ಅ) ಬಾಲ ನ್ಯಾಯ (ಮಕ್ಕಳ ಪಾಲನೆ ಹಾಗೂ ರಕ್ಷಣೆ) ಕರ್ನಾಟಕ ನಿಯಮಗಳು, 2016.

ಬಾಲ ನ್ಯಾಯ (ಮಕ್ಕಳ ಪಾಲನೆ ಹಾಗೂ ರಕ್ಷಣೆ) ಕಾಯ್ದೆ 2015 ಕೇಂದ್ರ ಕಾಯ್ದೆಯಾಗಿದ್ದು, ಜನವರಿ 2015 ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ.

ಈ ಕಾಯ್ದೆಗೆ ಭಾರತ ಸರ್ಕಾರವು (ಮಕ್ಕಳ ಪಾಲನೆ ಹಾಗೂ ರಕ್ಷಣೆ) ನಿಯಮಾವಳಿ 2000 ರೂಪಿಸಿದ್ದು ಈ ನಿಯಮಾವಳಿಗಳು 25 ಸೆಪ್ಟೆಂಬರ್ 2008 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುತ್ತದೆ. ರಾಜ್ಯ ಸರ್ಕಾರದಿಂದ ಈ ಬಗ್ಗೆ ರಾಜ್ಯ ನಿಯಮಾವಳಿಗಳನ್ನು ರಚಿಸಿ ರಾಜ್ಯ ಪತ್ರದಲ್ಲಿ ದಿನಾಂಕ 30.12.2010ರಂದು ಪ್ರಕಟಿಸಲಾಗಿದೆ.

2. ಲೈಂಗಿಕ ದೌರ್ಜನ್ಯದಿಂದ ಮಕ್ಕಳನ್ನು ಸಂರಕ್ಷಿಸುವ ಕಾಯ್ದೆ 2012 ಮತ್ತು ನಿಯಮಗಳು :- (ಜೌಅಷಔ ೦ಊಣ)

ಲೈಂಗಿಕ ದೌರ್ಜನ್ಯದಿಂದ ಮಕ್ಕಳ ಸಂರಕ್ಷಿಸುವ ಕಾಯ್ದೆ, 2012 ಕೇಂದ್ರ ಕಾಯ್ದೆಯಾಗಿದ್ದು, ಜೂನ್ 20, 2012ರಂದು ಕೇಂದ್ರ ಗೆಜೆಟ್‌ನಲ್ಲಿ ಪ್ರಕಟಗೊಂಡಿದ್ದು, ದಿನಾಂಕ: 14.11.2012ರಿಂದ ದೇಶಾದ್ಯಂತ ಈ ಕಾನೂನನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾಯ್ದೆಯು ಮಕ್ಕಳನ್ನು ಲೈಂಗಿಕ ಹಲ್ಲೆ, ಲೈಂಗಿಕ ಕಿರುಕುಳ ಮತ್ತು ಅಶ್ಲೀಲ ವಿಷಯಗಳ ಹಿಂಸೆಗಳಿಂದ ರಕ್ಷಿಸುತ್ತದೆ. ಇಂತಹ ಪ್ರಾಸಂಗಿಕ ಪ್ರಕರಣಗಳ ನ್ಯಾಯ ವಿಚಾರಣೆ ಮಾಡಲು “ವಿಶೇಷ ನ್ಯಾಯಾಲಯಗಳನ್ನು” ಸ್ಥಾಪಿಸಲು ಅವಕಾಶ ಮಾಡಿದೆ ಹಾಗೂ ರಾಜ್ಯದಲ್ಲಿ ಈ ನ್ಯಾಯಾಲಯಗಳು ಸ್ಥಾಪಿತಗೊಂಡಿದೆ.

3) ಹಿಂದೂ ದತ್ತು ಮತ್ತು ನಿರ್ವಹಣಾ ಕಾಯ್ದೆ.1956 ಮತ್ತು ವಾರ್ಡ್ಸ್ ಕಾಯ್ದೆ, 1860:

ಭಾರತದಲ್ಲಿ ದತ್ತು ಸಕ್ರಿಯವಾಗಿ ಏಕ ರೀತಿಯ ಕಾಯ್ದೆ ಇಲ್ಲದೆ ಇರುವುದರಿಂದ ಆಯಾ ಧರ್ಮಕ್ಕೆ ಅನುಗುಣವಾಗಿ ದತ್ತು ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆ. ಪ್ರಮುಖವಾಗಿ ಹಿಂದೂ ದತ್ತು ಮತ್ತು ನಿರ್ವಹಣಾ

ಕಾಯ್ದೆ, 1956 ಮತ್ತು ವಾರ್ಡ್ಸ್ ಕಾಯ್ದೆ, 1860 ಈ ಎರಡು ಕಾಯ್ದೆಯಡಿಯಲ್ಲಿ ದತ್ತು ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆ.

<u>ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಅಡಿಯಲ್ಲಿನ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು</u>

1. <u>ರಕ್ಷಣೆ, ಸಹಕಾರ ಮತ್ತು ಪುನರ್‌ವಸತಿಯ ಸೇವೆಗಳು:</u>

1) ಮಕ್ಕಳ ಸಹಾಯವಾಣಿ ಸೇವೆ:

ಸಂಕಷ್ಟದಲ್ಲಿರುವ ಮಕ್ಕಳಿಗೆ ತುರ್ತು ಸೇವೆಯನ್ನು ಒದಗಿಸುವ ಸಲುವಾಗಿ ಮಕ್ಕಳ ಸಹಾಯವಾಣಿಯು ದೇಶದಲ್ಲಿ ದಿನದ 24 ಗಂಟೆಗಳು ಕಾರ್ಯನಿರ್ವಹಿಸುತ್ತಿದೆ. ಮಕ್ಕಳ ಸುರಕ್ಷಿತ ಜಾಲವನ್ನು ಪ್ರತಿಯೊಂದು ಮಗುವೂ ತಲುಪುವ ಗುರಿಯನ್ನು ಮಕ್ಕಳ ಸಹಾಯವಾಣಿ ಹೊಂದಿರುತ್ತದೆ. ಮಕ್ಕಳ ಸಹಾಯವಾಣಿಯು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಭಾರತ ಸರ್ಕಾರದ ಮಕ್ಕಳ ರಕ್ಷಣಾ ಸೇವೆಗಳಲ್ಲಿ ಪ್ರಮುಖವಾದುದಾಗಿದೆ. ಈ ಕಾರ್ಯಕ್ರಮವನ್ನು 1999ರಲ್ಲಿ ಕೇಂದ್ರ ಸರ್ಕಾರದಿಂದ ಅನುಷ್ಠಾನಕ್ಕೆ ತರಲಾಗಿದ್ದು, ರಾಜ್ಯದಲ್ಲಿ 24 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿದೆ. ಚೈಲ್ಡ್ ಲೈನ್ ಇಂಡಿಯಾ ಫೌಂಡೇಷನ್, ಮುಂಬೈ, ಇದು ಒಂದು ಸ್ವಯಂ ಸೇವಾ ಸಂಸ್ಥೆಯಾಗಿದ್ದು, ದೇಶದ ಎಲ್ಲಾ ನಗರ ಹಾಗೂ ಜಿಲ್ಲೆಗಳಲ್ಲಿ ಮಕ್ಕಳ ಸಹಾಯವಾಣಿ ಸೇವೆಗಳನ್ನು ಅನುಷ್ಠಾನಗೊಳಿಸಲು ಮತ್ತು ಉಸ್ತುವಾರಿ ನೋಡಿಕೊಳ್ಳಲು ಈ ಸಂಸ್ಥೆಯನ್ನು ಭಾರತ ಸರ್ಕಾರವು ರಾಷ್ಟ್ರಮಟ್ಟದ ಮಾತೃ ಸಂಸ್ಥೆಯಾಗಿ ಗುರುತಿಸಿದೆ.

ಮಕ್ಕಳ ಸಹಾಯವಾಣಿ ಸೇವೆಯು, ಮಂಗಳೂರು, ಬೆಂಗಳೂರು, ಕಲ್ಬುರ್ಗಿ, ಬೀದರ್, ಧಾರವಾಡ, ದಾವಣಗೆರೆ, ಮೈಸೂರು, ಶಿವಮೊಗ್ಗ, ಮಂಡ್ಯ, ಬಳ್ಳಾರಿ, ಕೋಲಾರ, ಹಾಸನ, ಕೊಪ್ಪಳ, ಕೊಡಗು, ತುಮಕೂರು, ಬೆಳಗಾವಿ, ವಿಜಯಪುರ, ಉಡುಪಿ, ರಾಮನಗರ, ಉತ್ತರ ಕನ್ನಡ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಯಾದಗಿರಿ, ಗದಗ, ಒಳಗೊಂಡಂತೆ ಒಟ್ಟು 24 ಜಿಲ್ಲೆಗಳಲ್ಲಿ ಪ್ರಚಲಿತದಲ್ಲಿದೆ.

2) ನಗರ ಮತ್ತು ಅರೆನಗರ ಪ್ರದೇಶಗಳಲ್ಲಿ ಮಕ್ಕಳ ರಕ್ಷಣೆ ಮತ್ತು ಪೋಷಣೆಗಾಗಿ

ತೆರೆದ ತಂಗುದಾಣಗಳು:

ನಗರ ಮತ್ತು ಅರೆ ನಗರ ಪ್ರದೇಶಗಳಲ್ಲಿ ಕುಟುಂಬದ ಬೆಂಬಲ ಇಲ್ಲದ, ಪಾಲನೆ ಮತ್ತು ಪೋಷಣೆಯ ಅಗತ್ಯವುಳ್ಳ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಬೆಂಬಲ ಒದಗಿಸುವುದೇ ಈ ಕಾರ್ಯಕ್ರಮದ ಗುರಿಯಾಗಿರುತ್ತದೆ – ಮುಖ್ಯವಾಗಿ ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳು, ಚಿಂದಿ ಆಯುವ ಮಕ್ಕಳು, ಬೀದಿ ಮಕ್ಕಳು, ಕೆಲಸ ಮಾಡುವ ಮಕ್ಕಳು, ಅನಾಥ ಮಕ್ಕಳು, ಸಾಗಾಣೆಯಾದ ಮಕ್ಕಳು, ಪರಿತ್ಯಜಿಸಲ್ಪಟ್ಟ ಮಕ್ಕಳು, ಶೋಷಣೆ, ದೌರ್ಜನ್ಯಕ್ಕೆ ಒಳಗಾದ ಬೀದಿ ಮಕ್ಕಳು.

<u>ಉದ್ದೇಶಗಳು:-</u>

- ಅನಾಥ ಹಾಗೂ ಅಲಕ್ಷ್ಯ ಬೀದಿ ಮಕ್ಕಳಿಗೆ ಈ ತಂಗುದಾಣಗಳು, ಪೌಷ್ಟಿಕ ಆಹಾರ, ಆರೋಗ್ಯ ಸೇವೆ, ಸ್ವಚ್ಛತೆ ಹಾಗೂ ನೈರ್ಮಲ್ಯ, ಕುಡಿಯುವ ಶುದ್ಧ ನೀರು, ಶಿಕ್ಷಣ, ಆಟಪಾಠಗಳಿಗೆ ಇತರೆ ಸೌಕರ್ಯಗಳನ್ನು ಒದಗಿಸಿ ಅವರಿಗೆ ಶೋಷಣೆ/ದೌರ್ಜನ್ಯಗಳ ವಿರುದ್ಧ ರಕ್ಷಣೆಯನ್ನು ಒದಗಿಸುವುದು.
- ಬೀದಿ ಮಕ್ಕಳನ್ನು ಶಾಲೆಗಳಿಗೆ / ಕೆಲಸಕ್ಕೆ ಸೇರಿಸುವುದು, ವೃತ್ತಿಪರ ಶಿಕ್ಷಣ ನೀಡುವುದು, ಆರೋಗ್ಯ ಸೇವೆಗಳನ್ನು ಒದಗಿಸುವುದು ಹಾಗೂ ಅವರಲ್ಲಿ ಸಾಮಾನ್ಯವಾಗಿರುವ HIV/AIDS ರೋಗ ಹಾಗೂ ಮಾದಕ ವಸ್ತುಗಳ ಬಳಕೆಯನ್ನು ಕಡಿಮೆ ಮಾಡುವುದು.

ಮನೆ ಅಥವಾ ಕುಟುಂಬದ ಬೆಂಬಲ ಇಲ್ಲದಿರುವ ಬೀದಿ ಮಕ್ಕಳಿಗೆ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 24 ಗಂಟೆ ತೆರೆದಿರುವ ತಂಗುದಾಣಗಳನ್ನು ನಡೆಸಲಾಗುತ್ತಿದೆ. ಅಲ್ಲದೇ 2014–15ನೇ ಸಾಲಿಗೆ ಕೇಂದ್ರ ಸರ್ಕಾರವು ರಾಜ್ಯದಲ್ಲಿ ಹೊಸದಾಗಿ 18 ಮಕ್ಕಳ ತೆರೆದ ತಂಗುದಾಣಗಳಿಗೆ ಅನುಮೋದನೆ ನೀಡಿದ್ದು, ಈ ಹೊಸದಾದ 18 ತೆರೆದ ತಂಗುದಾಣಗಳು 2014ರ ಅಕ್ಟೋಬರ್ ಮಾಹೆಯಿಂದ ಕಾರ್ಯಾರಂಭ ಮಾಡಿರುತ್ತವೆ. ರಾಜ್ಯದಲ್ಲಿ ಪ್ರಸ್ತುತ ಒಟ್ಟಾರೆಯಾಗಿ 42 ಮಕ್ಕಳ ತೆರೆದ ತಂಗುದಾಣಗಳಿರುತ್ತವೆ. ಒಟ್ಟು ಯೋಜನಾ ವೆಚ್ಚದಲ್ಲಿ ಶೇಕಡ 90 ರಷ್ಟು ಕೇಂದ್ರ ಸರ್ಕಾರವು ಹಾಗೂ ಉಳಿದ ವೆಚ್ಚವನ್ನು ಸಂಬಂಧಪಟ್ಟ ಸಂಸ್ಥೆಯು ಭರಿಸಬೇಕಾಗುತ್ತದೆ. ಪ್ರಸ್ತುತ 18 ಜಿಲ್ಲೆಗಳಲ್ಲಿ 42 ತೆರೆದ ತಂಗುದಾಣಗಳನ್ನು 40 ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ.

<u>3.ಕುಟುಂಬ ಆಧಾರಿತ ಅಸಾಂಸ್ಥಿಕ ಸೇವೆಗಳು ಪ್ರಾಯೋಜಕತ್ವ, ಪೋಷಕತ್ವ, ದತ್ತು ಕಾರ್ಯಕ್ರಮ ಹಾಗೂ ಅನುಪಾಲನಾ ಸೇವೆ.</u>

ಅ. ಪ್ರಾಯೋಜಕತ್ವ ಕಾರ್ಯಕ್ರಮ:

ಪ್ರಾಯೋಜಕತ್ವ ಕಾರ್ಯಕ್ರಮವು ಮಕ್ಕಳನ್ನು ಸಂಸ್ಥೆಯ ವಾತಾವರಣದಿಂದ ಬೇರ್ಪಡಿಸಿ ಕುಟುಂಬದ ವಾತಾವರಣದಲ್ಲಿ ಬೆಳೆಸಲು ಪೂರಕವಾದ ಕಾರ್ಯಕ್ರಮವಾಗಿದೆ. ಈ ಯೋಜನೆಯನ್ನು ರಾಜ್ಯ ಸರ್ಕಾರವು 2006–07ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮದಡಿ ಬಡತನ ಕುಟುಂಬದಲ್ಲಿ ಬೆಳೆಯುತ್ತಿರುವ ಮಕ್ಕಳ ಆರೋಗ್ಯ, ಚಿಕಿತ್ಸೆ, ಪೌಷ್ಠಿಕ ಆಹಾರ ಮತ್ತು ಶಿಕ್ಷಣಕ್ಕೆ ರೂ. 1000/– ಗಳ ಆರ್ಥಿಕ ಸಹಾಯವನ್ನು ನೀಡುವುದಾಗಿದೆ. ಮಕ್ಕಳನ್ನು ಸಂಸ್ಥೆಯ ವಾತಾವರಣದಿಂದ ಬೇರ್ಪಡಿಸಿ ಕುಟುಂಬದ ವಾತಾವರಣದಲ್ಲಿ ಬೆಳೆಸಲು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು ಹೊಸ ಮಾರ್ಗಸೂಚಿಯನ್ನು ಹೊರಡಿಸಿದ್ದು, ಈ ಮಾರ್ಗಸೂಚಿಯನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ಆದೇಶ ಸಂ:ಮಮಇ 159 ಮಭಾಬ 2012, ಬೆಂಗಳೂರು ದಿನಾಂಕ: 13–03–2013 ರಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ಹೊರಡಿಸಿರುತ್ತದೆ.

<u>ಆ. ಪೋಷಕತ್ವ:</u>

- ಮಾರಣಾಂತಿಕ ಕಾಯಿಲೆ, ತೀವ್ರ ಅನಾರೋಗ್ಯ, ಸಾವು ಅಥವಾ ಇನ್ನಿತರೆ ಕಾರಣಗಳಿಂದ ಪೋಷಕರ ಆರೈಕೆಯಿಂದ ವಂಚಿತರಾದ ಮಕ್ಕಳನ್ನು ವಿಸ್ತೃತ ಕುಟುಂಬ ಸದಸ್ಯರು ಅಥವಾ ಅಸಂಬಂಧಿತ ವ್ಯಕ್ತಿ/ಕುಟುಂಬದಲ್ಲಿ ತಾತ್ಕಾಲಿಕ ಆರೈಕೆ ನೀಡುವ ಹಾಗೂ ಕಾರಣಾಂತರಗಳಿಂದ ದತ್ತು ಸ್ವೀಕಾರಕ್ಕೆ ಒಳಪಡಲು ಸಾಧ್ಯವಿಲ್ಲದ ಮಕ್ಕಳಿಗೆ ತಾತ್ಕಾಲಿಕ ಪೋಷಕರನ್ನು ನೀಡುವ ಪರ್ಯಾಯ ವ್ಯವಸ್ಥೆ. ಅಂತಿಮವಾಗಿ ಕುಟುಂಬದ ಸ್ಥಿತಿ ಸುಧಾರಿಸಿದಾಗ ಮಕ್ಕಳನ್ನು ಪುನರ್ಮಿಲನ ಮಾಡುವುದು ಹಾಗೂ ಅತ್ಯಂತ ಕ್ಲಿಷ್ಟಕರವಾದ ಸಂದರ್ಭಗಳಲ್ಲಿ ಮಕ್ಕಳನ್ನು ಸಾಂಸ್ಥಿಕ ಸೇವೆಗೆ ಒಳಪಡಿಸುವುದನ್ನು ತಪ್ಪಿಸುವುದು ಪೋಷಕತ್ವ ಕಾರ್ಯಕ್ರಮದ ಗುರಿ.

ಇ. ಮಕ್ಕಳನ್ನು ದತ್ತು ನೀಡುವ ಕಾರ್ಯಕ್ರಮ:

ದತ್ತು ಪಕ್ರಿಯೆಯು ಅನಾಥ, ಪರಿತ್ಯಕ್ತ ಹಾಗೂ ನಿರ್ಗತಿಕ ಮಕ್ಕಳ ಪುನರ್ವಸತಿಗೆ ಶಿಫಾರಸ್ಸು ಮಾಡಲಾಗುವ ಒಂದು ಸೂಕ್ತ ಕಾರ್ಯಕ್ರಮ. ಇಂತಹ ಮಕ್ಕಳಿಗೆ ಕುಟುಂಬದ ವಾತಾವರಣ ಕಲ್ಪಿಸಿ ಮಗುವಿಗೆ ಖಾಯಂ ಆಗಿ ಜೈವಿಕ ಮಕ್ಕಳನ್ನು ಹೊಂದಿಲ್ಲದ ಪೋಷಕರನ್ನು ಒದಗಿಸಿಕೊಟ್ಟು ಸಾಮಾಜಿಕವಾಗಿ ಹಾಗೂ ಕಾನೂನು ಬದ್ದವಾಗಿ ಕುಟುಂಬದ ವಾತಾವರಣವನ್ನು ಸೃಷ್ಟಿಸುವುದಾಗಿದೆ. ಮಗುವಿಗೆ ಅವಶ್ಯವಿರುವ ಪ್ರೀತಿ ಮತ್ತು ಆರೈಕೆಯನ್ನು ಕುಟುಂಬ ವಾತಾವರಣವು ಕಲ್ಪಿಸುತ್ತದೆ. ದತ್ತು ಕಾರ್ಯಕ್ರಮವು ಮಗು ಮತ್ತು ಪೋಷಕರಿಗೆ ಪರಸ್ಪರ ಅನಿವಾರ್ಯತೆ ಅನ್ಯೋನ್ಯ ಸಂಬಂಧವನ್ನು ಕಲ್ಪಿಸುವುದಾಗಿದೆ. ದತ್ತು ಕಾರ್ಯಕ್ರಮದ ಪ್ರಮುಖ ಉದ್ದೇಶವೆಂದರೆ ಕಾನೂನು ಬದ್ಧವಾಗಿ ಸ್ವದೇಶಿ ದತ್ತು ಕಾರ್ಯಕ್ರಮವನ್ನು ಉತ್ತೇಜಿಸುವುದು ಮತ್ತು ಕಾನೂನು ಬಾಹಿರವಾಗಿ ನಡೆಯುವ ದತ್ತು ಪ್ರಕ್ರಿಯೆಯನ್ನು ತಡೆಯುವುದಾಗಿದೆ.

ಸ್ವದೇಶಿ ಮತ್ತು ವಿದೇಶಿ ದತ್ತು ಪ್ರಕ್ರಿಯೆಯನ್ನು 25 ಸ್ವಯಂ ಸೇವಾ ಸಂಸ್ಥೆಗಳು ಹಾಗೂ 5 (6 ಘಟಕ) ಸರ್ಕಾರಿ ವಿಶೇಷ ದತ್ತು ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಎಲ್ಲಾ 31 ವಿಶೇಷ ದತ್ತು ಸಂಸ್ಥೆಗಳು ಸ್ವದೇಶಿ ದತ್ತು ಕಾರ್ಯಕ್ರಮವನ್ನು ನಡೆಸುತ್ತಿವೆ. ಇವುಗಳಲ್ಲಿ 5 ಸಂಸ್ಥೆಗಳಿಗೆ (ಖಖಕು) ಖಜ್ಞುಥುಖಜು ಖಟಿಜಚಿಟಿ ಕುಚಿಛಿಜಚಿಚಿಣ ಂಡಚಿಛಿಥಿ ವಿದೇಶಿ ದತ್ತು ನೀಡಲು ಕಾರಾದಿಂದ ಪರವಾನಗಿ ನೀಡಲಾಗಿರುತ್ತದೆ.

ರಾಜ್ಯ ಸರ್ಕಾರದಿಂದ 2011ರಲ್ಲಿ ಸಾರಾ ಸಮಿತಿ ರಚನೆಯಾಗಿರುತ್ತದೆ. ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯು ರಾಜ್ಯದಲ್ಲಿ ಮಾನ್ಯತೆ ಪಡೆದ ದತ್ತು ಸಂಸ್ಥೆಗಳ ಕಾರ್ಯಕ್ರಮಗಳನ್ನು ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡಲಾಗುವುದು.

1. ತೊಟ್ಟಿಲ ಸ್ವೀಕಾರ ಕೇಂದ್ರ

ಲಕ್ಷಾಂತರ ನವಜಾತ ಶಿಶುಗಳು ಹಲವಾರು ಕಾರಣಗಳಿಂದ ಅನಾಥರಾಗುತ್ತಿದ್ದು, ಇದರಲ್ಲಿ ಪ್ರಮುಖ ಕಾರಣವೆಂದರೆ ಅವಿವಾಹಿತ ಮಹಿಳೆಯರು ತಾಯಿಯಾಗುತ್ತಿರುವುದು. ಇಂತಹ ಮಕ್ಕಳು ಅಪ್ರಾಮಾಣಿಕ ವ್ಯಕ್ತಿಗಳಿಗೆ ಹಾಗೂ ಬೀದಿ ನಾಯಿಗಳಿಗೆ ಬಲಿಪಶುವಾಗುವುದನ್ನು ನಿಯಂತ್ರಿಸಲು ತೊಟ್ಟಿಲು ಶಿಶು ಸ್ವೀಕಾರ ಕೇಂದ್ರವನ್ನು ಪ್ರಾರಂಭಿಸಲಾಗಿರುತ್ತದೆ. ಇಂತಹ ನವಜಾತ, ಪರಿತ್ಯಕ್ತ, ಅನಾಥ ಮಕ್ಕಳಿಗೆ ಪಾಲನೆ ಮತ್ತು ಪೋಷಣೆ, ಅಭಿರಕ್ಷಣೆ ನೀಡಿ ಜೀವವನ್ನು ಉಳಿಸಲು ವಿಶೇಷ ದತ್ತು ಸಂಸ್ಥೆಗಳು, ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಖಾಸಗಿ ನರ್ಸಿಂಗ್ ಹೋಂಗಳು, ಅಲ್ಪಾವಧಿ ರಕ್ಷಣಾ ಗೃಹಗಳು, ಸ್ವಾಧಾರ ಕೇಂದ್ರಗಳಲ್ಲಿ, ತೊಟ್ಟಿಲು ಸೌಲಭ್ಯವನ್ನು ಕಲ್ಪಿಸಿ ಮಕ್ಕಳನ್ನು ಸ್ವೀಕರಿಸಲಾಗುವುದು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಖಖ ಅನುಪಾಲನಾ ಸೇವೆಗಳು:

ಬಾಲಮಂದಿರಗಳಿಂದ 18 ವರ್ಷ ಪೂರ್ಣಗೊಂಡ ಮಕ್ಕಳು ಬಿಡುಗಡೆ ಮಾಡಬೇಕಾದ ಸಂದರ್ಭದಲ್ಲಿ, ಮಕ್ಕಳ ಕಲ್ಯಾಣ ಸಮಿತಿಯು ಅಂತಹ ಮಕ್ಕಳಿಗೆ ಸಮಾಜದೊಡನೆ ಬೆರೆಯಲು ಇನ್ನೂ ಕಾಲಾವಕಾಶದ ಅಗತ್ಯವೆಂದು ಅಭಿಪ್ರಾಯಪಟ್ಟಲ್ಲಿ ಅಥವಾ ಇನ್ನ್ಯಾವುದೇ ಪ್ರಮುಖ ಕಾರಣದಿಂದ ಮಗುವಿಗೆ ಸಂಸ್ಥೆಯ ನೆರವು ಅಗತ್ಯವೆನಿಸಿದಲ್ಲಿ ಅಂತಹ ಮಕ್ಕಳಿಗೆ ಅನುಪಾಲನಾ ಸೇವೆಗಾಗಿ ಆದೇಶ ಮಾಡಿದಲ್ಲಿ ಗಂಡು ಮಕ್ಕಳನ್ನು ಪುರುಷ ಅನುಪಾಲನಾ ಗೃಹಗಳಿಗೆ ಹಾಗೂ ಹೆಣ್ಣು ಮಕ್ಕಳನ್ನು ರಾಜ್ಯ ಮಹಿಳಾ ನಿಲಯಗಳಿಗೆ ದಾಖಲೆ ಮಾಡಲಾಗುವುದು.

ಬೆಳಗಾವಿಯಲ್ಲಿ ಬಾಲಕರಿಗಾಗಿ ಒಂದು ಪ್ರತ್ಯೇಕ ಅನುಪಾಲನಾ ಗೃಹ, ಬೆಂಗಳೂರಿನಲ್ಲಿ ಬಾಲಕರ ಬಾಲಮಂದಿರಕ್ಕೆ ಹೊಂದಿಕೊಂಡಂತೆ ಒಂದು ಘಟಕ ಹಾಗೂ ಬುದ್ಧಿಮಾಂದ್ಯ ಮಕ್ಕಳ ಬಾಲಮಂದಿರಕ್ಕೆ ಹೊಂದಿಕೊಂಡಂತೆ ಇನ್ನೊಂದು ಘಟಕ ಸೇರಿ ಒಟ್ಟು 3 ಅನುಪಾಲನಾ ಗೃಹಗಳಿವೆ.

ಸದರಿ ಸಂಸ್ಥೆಯ ನಿವಾಸಿಗಳು ಪ್ರೌಢಶಾಲೆ, ಐ.ಟಿ.ಐ. ಡಿಪ್ಲೋಮಾ, ಕಾಲೇಜು ವಿದ್ಯಾಭ್ಯಾಸವನ್ನು ಮುಂದುವರೆಸಲು ಪ್ರೋತ್ಸಾಹಿಸುವುದರೊಂದಿಗೆ ಅವರಿಗೆ ಉದ್ಯೋಗವನ್ನು ದೊರಕಿಸಿಕೊಟ್ಟು ಸಮಾಜದ ಮುಖ್ಯವಾಹಿನಿಗೆ ತರಲು ಪ್ರಯತ್ನ ಮಾಡಲಾಗುತ್ತಿದೆ.

ಇ. ಸಾಂಸ್ಥಿಕ ಸೇವೆಗಳು

1. ಬಾಲ ಮಂದಿರಗಳು:

ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಬಂದ ಮಕ್ಕಳ ಪ್ರಕರಣಗಳ ವಿಚಾರಣೆ ವೇಳೆಯಲ್ಲಿ ಹಾಗೂ ದೀರ್ಘಾವಧಿ ಪುನರ್ವಸತಿ ಅಗತ್ಯವಿರುವ ಅನಾಥ ಹಾಗೂ ನಿರ್ಗತಿಕ ಮಕ್ಕಳ ಪಾಲನೆ ಮತ್ತು ರಕ್ಷಣೆಯ ಉದ್ದೇಶದಿಂದ ಬಾಲನ್ಯಾಯ ಕಾಯ್ದೆ ಸೆಕ್ಷನ್ 30ರನ್ವಯ ಬಾಲಮಂದಿರಗಳನ್ನು (ಬಾಲಕ/ಬಾಲಕಿಯರ) ಸ್ಥಾಪಿಸಲಾಗಿದೆ.

ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಬಂದ ಮಕ್ಕಳನ್ನು ಸಮಿತಿಯ ಆದೇಶದನ್ವಯ ಬಾಲಮಂದಿರಗಳಿಗೆ ದಾಖಲು ಮಾಡಿಕೊಳ್ಳಲಾಗುವುದು. ಈ ರೀತಿ ಅಭಿರಕ್ಷಣೆಗೆ ಒಳಪಟ್ಟ ಮಕ್ಕಳಿಗೆ ಮೂಲಭೂತ ಅವಶ್ಯಕತೆಗಳಾದ ಆಹಾರ, ವಸತಿ ಒದಗಿಸುವುದರ ಜೊತೆಗೆ ಪುನರ್ವಸತಿಗೆ ಅಗತ್ಯವಾದ ಶಿಕ್ಷಣ ಹಾಗೂ ತರಬೇತಿಯನ್ನು ಒದಗಿಸಲಾಗುವುದು. ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಸರ್ಕಾರಿ ಅಥವಾ ಖಾಸಗಿ ಶಾಲೆ ಮತ್ತು ಕಾಲೇಜುಗಳಿಗೆ ಕಳುಹಿಸಲಾಗುತ್ತದೆ.

ರಾಜ್ಯದಲ್ಲಿ ಒಟ್ಟು 56 ಬಾಲಮಂದಿರಗಳಿದ್ದು, ಇವುಗಳಲ್ಲಿ 28 ಬಾಲಕರಿಗಾಗಿ ಹಾಗು 27 ಬಾಲಕಿಯರಿಗಾಗಿ ಹಾಗು 1 ಶಿಶುಮಂದಿರ 6 ವರ್ಷದೊಳಗಿನ ಮಕ್ಕಳಿಗಾಗಿ(ಗಂಡು ಮತ್ತು ಹೆಣ್ಣು ಮಕ್ಕಳಿಗಾಗಿ) ಕಾರ್ಯನಿರ್ವಹಿಸುತ್ತಿವೆ, ಇವುಗಳಲ್ಲಿ ಮನೋವಿಕಲ ಗಂಡು ಮಕ್ಕಳಿಗಾಗಿ ಬೆಂಗಳೂರು ಹಾಗೂ ಬಳ್ಳಾರಿಯಲ್ಲಿ, ಹೆಣ್ಣು ಮಕ್ಕಳಿಗಾಗಿ ಹುಬ್ಬಳ್ಳಿ ಹಾಗೂ ಗುಲ್ಬರ್ಗಾದಲ್ಲಿ ಬಾಲ ಮಂದಿರಗಳನ್ನು ನಡೆಸಲಾಗುತ್ತಿದೆ. 18 ರಿಂದ 21 ವರ್ಷದವರಿಗಾಗಿ ಬೆಳಗಾವಿಯಲ್ಲಿ ಪುರುಷರ ಅನುಪಾಲನಾ ಗೃಹವನ್ನು ಸ್ಥಾಪಿಸಲಾಗಿದೆ.

2. ಅರ್ಹ ಸಂಸ್ಥೆಗಳು:

ಬಾಲ ನ್ಯಾಯ ಕಾಯ್ದೆ ಅಡಿಯಲ್ಲಿ ಮಕ್ಕಳ ಪಾಲನೆ ಮತ್ತು ರಕ್ಷಣೆ ಹಾಗೂ ಪುನರ್ವಸತಿ ಒದಗಿಸುತ್ತಿರುವ ಅರ್ಹ ಸ್ವಯಂ ಸೇವಾ ಸಂಸ್ಥೆಗಳನ್ನು ಅರ್ಹ ಸಂಸ್ಥೆಗಳೆಂದು ನೋಂದಣಿ ಮಾಡಲು ಅವಕಾಶವಿದ್ದು ಇಂತಹ 08 ಸಂಸ್ಥೆಗಳಿಗೆ ಸರ್ಕಾರದಿಂದ ಆರ್ಥಿಕ ಸಹಾಯ ಒದಗಿಸಲಾಗುತ್ತಿದೆ.

3. ವೀಕ್ಷಣಾಲಯಗಳು:

ವೀಕ್ಷಣಾಲಯಗಳು ಕಾನೂನಿನೊಡನೆ ಸಂಘರ್ಷಕ್ಕೊಳಪಟ್ಟ ಮಕ್ಕಳ, ಅವರ ವಿರುದ್ಧದ ವಿಚಾರಣೆ ಬಾಕಿ ಇರುವ ಅವಧಿಯಲ್ಲಿ ತಾತ್ಕಾಲಿಕವಾಗಿ ಅಭಿರಕ್ಷಣೆ ಒದಗಿಸುವ ಸಂಸ್ಥೆಗಳಾಗಿರುತ್ತವೆ. ಭಾರತೀಯ ದಂಡ ಸಂಹಿತೆ ಹಾಗೂ ಇತರೆ ಶಾಸನಗಳನ್ವಯ ಕಾನೂನಿನೊಡನೆ ಸಂಘರ್ಷಕ್ಕೊಳಪಟ್ಟ 18 ವರ್ಷದೊಳಗಿನ ಮಕ್ಕಳ ಪ್ರಕರಣಗಳನ್ನು ಬಾಲ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ)ಕಾಯ್ದೆ 2000ರ ಸೆಕ್ಷನ್ (4)ರಡಿ ಹಾಗೂ ತಿದ್ದುಪಡಿ ಕಾಯ್ದೆ 2006 ಸ್ಥಾಪಿಸಿರುವ ಬಾಲ ನ್ಯಾಯ ಮಂಡಳಿಯ ಮುಂದೆ ಹಾಜರುಪಡಿಸಲಾಗುವುದು.

ಕಾನೂನಿನೊಡನೆ ಸಂಘರ್ಷಣೆಗೆ ಒಳಪಟ್ಟ ಮಕ್ಕಳನ್ನು ವಿಚಾರಣಾ ಅವಧಿಯಲ್ಲಿ ಸಾಮಾನ್ಯವಾಗಿ 6 ತಿಂಗಳವರೆಗೆ ಪರಿವೀಕ್ಷಣೆಗಾಗಿ ವೀಕ್ಷಣಾಲಯದಲ್ಲಿ ಇಡಲಾಗುವುದು. ರಾಜ್ಯ ಸರ್ಕಾರ 16 ವೀಕ್ಷಣಾಲಯಗಳನ್ನು ಮಂಜೂರು ಮಾಡಿದ್ದು ಪ್ರಸ್ತುತ 16 ವೀಕ್ಷಣಾಲಯಗಳು ಕಾರ್ಯನಿರ್ವಹಿಸುತ್ತಿವೆ.

4.ವಿಶೇಷ ಗೃಹಗಳು

ಬಾಲ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ)ಕಾಯ್ದೆ 2000 ರ ಅಧಿನಿಯಮ ಸೆಕ್ಷನ್ 15ರಡಿ ಹಾಗೂ ತಿದ್ದುಪಡಿ ಕಾಯ್ದೆ 2006ರ ಅನ್ವಯ ಆದೇಶ ಮಾಡಿದ ಕಾನೂನಿನ ಸಂಘರ್ಷಕ್ಕೆ ಒಳಗಾದ ಮಕ್ಕಳ ಧೀರ್ಘಾವದಿ ಪುನರ್ವಸತಿಗಾಗಿ ವಿಶೇಷ ಗೃಹವನ್ನು ಸ್ಥಾಪಿಸಬೇಕಾಗಿದ್ದು, ಅದರಂತೆ ಬೆಂಗಳೂರು (ನಗರ)

ಹಾಗೂ ಬೆಳಗಾವಿಯಲ್ಲಿ ವೀಕ್ಷಣಾಲಯಕ್ಕೆ ಹೊಂದಿಕೊಂಡಂತೆ ಗಂಡು ಮಕ್ಕಳಿಗಾಗಿ ಹಾಗೂ ಬೆಂಗಳೂರು (ಗ್ರಾಮಾಂತರ) ಮತ್ತು ದಾವಣಗೆರೆ ವೀಕ್ಷಣಾಲಯಕ್ಕೆ ಹೊಂದಿಕೊಂಡಂತೆ ಹೆಣ್ಣು ಮಕ್ಕಳಿಗಾಗಿ ಸ್ಥಾಪಿಸಲಾಗಿದೆ.

ಸರ್ಕಾರವು ಏಕೋ (ಸೆಂಟರ್ ಫಾರ್ ಜುವಿನೈಲ್ ಜಸ್ಟೀಸ್), ಎಂಬ ಸ್ವಯಂ ಸೇವಾ ಸಂಸ್ಥೆಯನ್ನು ಅರ್ಹ ಸಂಸ್ಥೆಯೆಂದು ಮಾನ್ಯತೆ ನೀಡಿ ಬೆಂಗಳೂರು ನಗರದಲ್ಲಿ ವಿಶೇಷ ಗೃಹವನ್ನು ನಡೆಸಲು ಅನುಮತಿ ನೀಡಿರುತ್ತದೆ.

ಹೆಚ್.ಐ.ವಿ/ಏಡ್ಸ ಪೀಡಿತ ಮಕ್ಕಳಿಗೆ ವಿಶೇಷ ಪಾಲನಾ ಯೋಜನೆ

ಹೆಚ್.ಐ.ವಿ/ಏಡ್ಸನಿಂದ ಭಾದಿತ ಮಕ್ಕಳಿಗೆ ಹಾಗೂ ಹೆಚ್.ಐ.ವಿ/ಏಡ್ಸನಿಂದ ಸೋಂಕಿತ ಮಕ್ಕಳಿಗೆ ರಕ್ಷಣೆ ಮತ್ತು ಪೋಷಣೆಯನ್ನು ಒದಗಿಸುವ ಮುಖ್ಯ ಉದ್ದೇಶದೊಂದಿಗೆ ಈ ಕಾರ್ಯಕ್ರಮವನ್ನು ಮಾರ್ಚ್ 2010ರಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಇಂತಹ ಮಕ್ಕಳ ರಕ್ಷಣೆ ಮತ್ತು ಚಿಕಿತ್ಸೆಗಾಗಿ ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದರೂ ಸಹ ಅವರ ರಕ್ಷಣೆಯನ್ನು ಮಾಡುವಲ್ಲಿ ನ್ಯೂನ್ಯತೆಗಳು ಕಂಡು ಬಂದಿರುತ್ತದೆ. ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿಯು ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ, ಆರ್‌ಡಿಪಿಆರ್, ಸಾರಿಗೆ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಹಾಗೂ ಕರ್ನಾಟಕ ಆರೋಗ್ಯ ಸಂವರ್ಧನಾ ಟ್ರಸ್ಟ್‌ನ ಸಹಯೋಗದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತಲಿದೆ.

ಶಾಸನಬದ್ಧ ಪೂರಕ ಸೇವೆಗಳು

1. ಮಕ್ಕಳ ಕಲ್ಯಾಣ ಸಮಿತಿ

ಬಾಲನ್ಯಾಯ ಕಾಯ್ದೆಯ ಅನ್ವಯ ಮಕ್ಕಳ ಕಲ್ಯಾಣ ಸಮಿತಿಯು ಅಧ್ಯಕ್ಷರು ಮತ್ತು ನಾಲ್ಕು ಸದಸ್ಯರನ್ನು ಒಳಗೊಂಡಿದ್ದು, ನಾಲ್ಕು ಸದಸ್ಯರಲ್ಲಿ ಒಬ್ಬರು ಮಹಿಳೆ ಮತ್ತು ಒಬ್ಬರು ಮಕ್ಕಳ ವಿಷಯದಲ್ಲಿ ಪರಿಣಿತರಾಗಿದ್ದು, ಇವರುಗಳು ರಕ್ಷಣೆ ಮತ್ತು ಪೋಷಣೆಯ ಅಗತ್ಯವಿರುವ ಮಕ್ಕಳ ಬಗ್ಗೆ ಅಧಿಕಾರ ಚಲಾಯಿಸುವರು ಹಾಗೂ ಕರ್ತವ್ಯ ನಿರ್ವಹಿಸುವರು. ಎಲ್ಲಾ 30 ಜಿಲ್ಲೆಗಳಲ್ಲಿ ಒಟ್ಟು 33 ಮಕ್ಕಳ ಕಲ್ಯಾಣ ಸಮಿತಿಗಳನ್ನು ರಚಿಸಲಾಗಿದೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಗಂಡು ಮಕ್ಕಳಿಗಾಗಿ ಮತ್ತು ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕವಾಗಿ ಸೇರಿದಂತೆ ಒಟ್ಟು ಮೂರು ಮಕ್ಕಳ ಕಲ್ಯಾಣ ಸಮಿತಿಗಳನ್ನು ರಚಿಸಲಾಗಿದೆ. ಹಾಗೆಯೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು 2 ಮಕ್ಕಳ ಕಲ್ಯಾಣ ಸಮಿತಿಗಳನ್ನು ರಚಿಸಲಾಗಿದೆ.

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಕಾಯ್ದೆ 2000 ಮತ್ತು ತಿದ್ದುಪಡಿ ಕಾಯ್ದೆ 2006, ಹಾಗೂ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಕರ್ನಾಟಕ ನಿಯಮಗಳು 2010ರ ನಿಯಮ 22(1) ರನ್ವಯ 30/06/2014 ಮತ್ತು 27/09/2014 ರಂದು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ 33 ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರನ್ನು 3 ವರ್ಷಗಳ ಅವಧಿಗೆ ನೇಮಕಾತಿ ಮಾಡಲಾಗಿದೆ. ಸದಸ್ಯರಲ್ಲಿ ಕನಿಷ್ಠ ಒಬ್ಬರು ಮಹಿಳಾ ಸದಸ್ಯರು ಇರಲೇ ಬೇಕು.

2. ಬಾಲ ನ್ಯಾಯ ಮಂಡಳಿ

ಬಾಲನ್ಯಾಯ ಕಾಯ್ದೆಯ ಅನ್ವಯ ಬಾಲ ನ್ಯಾಯ ಮಂಡಳಿಯಲ್ಲಿ ಮೂವರು ಸದಸ್ಯರಿರುವರು. ಬೆಂಗಳೂರು ನಗರದಲ್ಲಿ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್‌ರು ಹಾಗೂ ಉಳಿದ ಜಿಲ್ಲೆಗಳಲ್ಲಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಬಾಲ ನ್ಯಾಯ ಮಂಡಳಿಯ ಅಧ್ಯಕ್ಷರಾಗಿರುತ್ತಾರೆ. ಉಳಿದ ಎರಡು ಸದಸ್ಯರು ಸಮಾಜ ಸೇವಾಕರ್ತರಾಗಿದ್ದು, ಇವರುಗಳು ಉಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರನ್ನು ಒಳಗೊಂಡಂತಹ ರಾಜ್ಯ

ಆಯ್ಕೆ ಸಮಿತಿಯಿಂದ ಆಯ್ಕೆಗೊಂಡವರಾಗಿರುತ್ತಾರೆ. ಎಲ್ಲಾ 30 ಜಿಲ್ಲೆಗಳಲ್ಲಿ ಬಾಲ ನ್ಯಾಯ ಮಂಡಳಿಗಳನ್ನು ರಚಿಸಲಾಗಿದೆ.

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಕಾಯ್ದೆ 2000 ಮತ್ತು ತಿದ್ದುಪಡಿ ಕಾಯ್ದೆ 2006, ಹಾಗೂ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಕರ್ನಾಟಕ ನಿಯಮಗಳು 2010ರ ನಿಯಮ 4(2) ರನ್ವಯ 30/06/2014 ಮತ್ತು 27/09/2014 ರಂದು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ 30 ಬಾಲ ನ್ಯಾಯ ಮಂಡಳಿ ಸದಸ್ಯರನ್ನು 3 ವರ್ಷಗಳ ಅವಧಿಗೆ ನೇಮಕಾತಿ ಮಾಡಲಾಗಿದೆ. ಸದಸ್ಯರಲ್ಲಿ ಕನಿಷ್ಠ ಒಬ್ಬರು ಮಹಿಳಾ ಸದಸ್ಯರು ಇರಲೇ ಬೇಕು.

3. ಮಕ್ಕಳ ವಿಶೇಷ ಪೊಲೀಸ್ ಘಟಕಗಳು

ಮಕ್ಕಳ ವಿಶೇಷ ಪೋಲೀಸ ಘಟಕವು ಜಿಲ್ಲಾ ಮಟ್ಟದಲ್ಲಿ ಮಕ್ಕಳ ಪ್ರಕರಣಗಳನ್ನು ನಿರ್ವಹಣೆ ಮಾಡುವ ಒಂದು ಪೋಲೀಸ ಘಟಕವಾಗಿರುತ್ತದೆ. ಮಕ್ಕಳ ವಿಶೇಷ ಪೋಲೀಸ ಘಟಕದಲ್ಲಿ ಐವರು ಸದಸ್ಯರಿರುವರು. ಪ್ರತಿ ಮಕ್ಕಳ ವಿಶೇಷ ಪೋಲೀಸ ಘಟಕಕ್ಕೆ ಪೋಲೀಸ ಇನ್ಸಪೆಕ್ಟರ್‌ಗಿಂತ ಮೇಲಿನ ರ್‍ಯಾಂಕಿನವರು ಅಧಿಕಾರಿಯಾಗಿದ್ದು ಅವರನ್ನು "ಹಿರಿಯ ಮಕ್ಕಳ ಕಲ್ಯಾಣ ಅಧಿಕಾರಿ" ಯೆಂದು ಗುರುತಿಸಲಾಗಿದೆ. ಈ ಘಟಕಕ್ಕೆ ಇಬ್ಬರು ಪೋಲೀಸ ಕಾನಸ್ಟೇಬಲ್‌ಗಳನ್ನು ಮಕ್ಕಳ ಪ್ರಕರಣಗಳನ್ನು ನಿರ್ವಹಿಸಲು, ದಾಖಲೀಕರಣ ಮತ್ತು ವರದಿ ತಯಾರಿಕೆಯಲ್ಲಿ ಸಹಕರಿಸಲು ನಿಯೋಜಿಸಲಾಗಿರುತ್ತದೆ. ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಇಬ್ಬರು ಸಮಾಜ ಕಾರ್ಯಕರ್ತರು ಮಕ್ಕಳ ವಿಶೇಷ ಪೋಲೀಸ ಘಟಕದ ಹಿರಿಯ ಮಕ್ಕಳ ಕಲ್ಯಾಣ ಅಧಿಕಾರಿಗೆ ಹಾಗೂ ಪೋಲೀಸ ಠಾಣೆಯ ಮಕ್ಕಳ ಕಲ್ಯಾಣ ಅಧಿಕಾರಿಗೆ ಮಕ್ಕಳ ಪ್ರಕರಣಗಳನ್ನು ನಿರ್ವಹಿಸಲು ಸಹಾಯ ಮಾಡುವರು. ಪೋಲೀಸ ಇಲಾಖೆಯಿಂದ 40 ಮಕ್ಕಳ ವಿಶೇಷ ಪೋಲೀಸ ಘಟಕಗಳನ್ನು ರಚಿಸಲಾಗಿದೆ. ಬೆಂಗಳೂರಿನಲ್ಲಿ 7 ವಲಯಗಳು, ಎಲ್ಲಾ 30 ಜಿಲ್ಲೆಗಳಲ್ಲಿ ಹಾಗೂ ಮೈಸೂರು, ಮಂಗಳೂರು ಮತ್ತು ಹುಬ್ಬಳ್ಳಿ-ಧಾರವಾಡಗಳಲ್ಲಿ 3 ಒಟ್ಟು 40 ಘಟಕಗಳು ಕಾರ್ಯನಿರ್ವಹಿಸುತ್ತಿವೆ.

ಕಾಣೆಯಾದ ಮಕ್ಕಳ ಬ್ಯೂರೋ

- ಬಾಲ ನ್ಯಾಯ (ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ-2000 ರ ಪ್ರಕಾರ ಕಾಣೆಯಾದ ಮಕ್ಕಳ ಬ್ಯೂರೋವನ್ನು 2007-08 ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ.
- ರಾಜ್ಯದ 26 ಜಿಲ್ಲೆಗಳಲ್ಲಿ ನೋಡಲ್ ಸಂಸ್ಥೆಯು ಈ ಕಾರ್ಯಕ್ರಮಗಳನ್ನು ಆರಂಭಿಸಿರುತ್ತದೆ.